

# ವಿಭಿನ್ನ ದಾರಿಯಲ್ಲಿ ಸೋನು

'ಇಂತಿ ನಿನ್ನ ಪ್ರೀತಿಯ' ಖ್ಯಾತಿಯ ಸೋನು ಉರುಫ್ ಶ್ರುತಿ ರಾಮಕೃಷ್ಣ ಅವರ ಎರಡನೇ ಇನಿಂಗ್ಸ್ ಭರ್ಜರಿಯಾಗಿ ಇರುವಂತಿದೆ. ಸ್ವಲ್ಪ ಕಾಲ ದೃಶ್ಯ ಮಾಧ್ಯಮದಿಂದ ದೂರ ಉಳಿದಿದ್ದ ಸೋನು ಅವರು, ಸಿನಿಮಾದಲ್ಲೇ ಅಸ್ತಿತ್ವ ಕಂಡುಕೊಳ್ಳಲು ನಿರ್ಧರಿಸಿದ ನಂತರ ನಟನೆಯ ಎರಡನೇ ಇನಿಂಗ್ಸ್ ಆರಂಭಿಸಿದ್ದರು. ಸದ್ಯಕ್ಕವರು ಕನ್ನಡ ಹಾಗೂ ತಮಿಳು ಚಿತ್ರರಂಗದಲ್ಲಿನ ಬಿಡುವಿರದ ತಾರೆಗಳಲ್ಲೊಬ್ಬರು.

ಸೋನು ನಟನೆಯ 'ಅಸ್ತಿತ್ವ' ಕಳೆದ ವಾರವಷ್ಟೇ ತೆರೆಕಂಡಿದೆ. ಅವರ ನಟನೆಯ 'ಶರಾವತಿ ತೀರದಲ್ಲಿ' ಚಿತ್ರ ಹೆಚ್ಚೂ ಕಡಿಮೆ ಶೂಟಿಂಗ್ ಮುಗಿಸುವ ಹಂತದಲ್ಲಿದೆ. ಇದರ ಜೊತೆ ಎರಡು ಮೂರು ತಮಿಳು ಚಿತ್ರಗಳಲ್ಲಿ ಅವರು ನಟಿಸುತ್ತಿದ್ದಾರೆ. ಸಿನಿಮಾ ಮಾತ್ರವಲ್ಲದೆ, ರಂಗಭೂಮಿಯ ಹೊಸ ಪ್ರಯೋಗಗಳಲ್ಲಿ ಕೂಡ ಸೋನು ತೊಡಗಿಸಿಕೊಳ್ಳುತ್ತಿರುವುದು ವಿಶೇಷ.

ನಾಯಕಿ ಪಾತ್ರಗಳಿಗಷ್ಟೇ ಜೋತುಬೀಳದೆ, ಪುಟ್ಟದಾದರೂ ಗಟ್ಟಿತನ ಹೊಂದಿರುವ ಪಾತ್ರಗಳು ಮುಖ್ಯ ಎನ್ನುವ ನಿಲುವು ತಳೆದಿರುವುದು ಸೋನು ಅವರ ಪಾಲಿಗೆ ಫಲ ಕೊಡುತ್ತಿದೆ. 'ಕಿರಗೂರಿನ ಗಯ್ಯಾಳಿಗಳು' ಚಿತ್ರದಲ್ಲಿನ ಪುಟ್ಟ ಪಾತ್ರದಲ್ಲೇ ಅವರು ಗಮನಸೆಳೆದಿದ್ದರು. ಇಡೀ ಚಿತ್ರದ ಪಾತ್ರಗಳು ಮಾತುಗಳ ಮೂಲಕ ಪ್ರೇಕ್ಷಕರ ಗಮನಸೆಳೆದರೆ, ಸೋನು ಕಣ್ಣುಗಳಲ್ಲೇ ಸಹೃದಯರ ಗಮನಸೆಳೆದಿದ್ದರು. 'ಶರಾವತಿ ತೀರದಲ್ಲಿ' ಚಿತ್ರದಲ್ಲಿ ಕೂಡ ಅವರ ಪಾತ್ರಕ್ಕೆ ಸಾಕಷ್ಟು ಮಹತ್ವ ಇದೆಯಂತೆ. 'ನಾಲ್ಕು ಪ್ರಮುಖ ಪಾತ್ರಗಳ ಸುತ್ತುವ ಕಥೆಯ ಈ ಚಿತ್ರದ ಪಾತ್ರ ನನ್ನ ವೃತ್ತಿಜೀವನದಲ್ಲಿ ಮುಖ್ಯವಾದುದು' ಎಂದು ಸೋನು ಹೇಳುತ್ತಾರೆ.

ಬಹುತೇಕ ನಟಿಯರು ಗ್ಲಾಮರ್ ಮೂಲಕ ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ದಿನಗಳಲ್ಲಿ, ಸೋನು ಕಲಾವಿದೆಯಾಗಿ ಗುರ್ತಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ವಿಶೇಷ.

# ತವರಿಗೆ ಬಂದ ಪ್ರಣೀತಾ

ಪ್ರಣೀತಾ ಎನ್ನುವ ಬಟ್ಟಲು ಕಣ್ಣುಗಳ ಚೆಲುವೆ ಮತ್ತೆ ಕನ್ನಡ ಚಿತ್ರರಂಗಕ್ಕೆ ಬಂದಿದ್ದಾಳೆ. ಸಹನಾ ಮೂರ್ತಿ ನಿರ್ದೇಶನದ 'ಲೀಡರ್' ಚಿತ್ರದಲ್ಲಿ ಶಿವರಾಜ್‌ಕುಮಾರ್‌ಗೆ ಜೋಡಿಯಾಗಿ ಈಕೆ ನಟಿಸುತ್ತಿದ್ದಾಳೆ.

'ಪೋರ್ಕಿ' ಚಿತ್ರದಲ್ಲಿ ದರ್ಶನ್‌ಗೆ ನಾಯಕಿಯಾಗಿ ನಟಿಸುವ ಮೂಲಕ ಪ್ರಣೀತಾ ಕನ್ನಡ ಚಿತ್ರರಂಗಕ್ಕೆ ಪರಿಚಿತರಾದವರು. ಆನಂತರ 'ಜರಾಸಂಧ', 'ಭೀಮಾ ತೀರದಲ್ಲಿ', 'ಅಂಗಾರಕ', 'ಮಿಸ್ಟರ್ 420', 'ಸ್ನೇಹಿತರು' ಹಾಗೂ 'ಸೆಕೆಂಡ್ ಹ್ಯಾಂಡ್ ಲವರ್' ಚಿತ್ರಗಳಲ್ಲಿ ಅಭಿನಯಿಸಿದ್ದ ಅವರು, ತೆಲುಗು–ತಮಿಳು ಚಿತ್ರಗಳಲ್ಲಿ ಬಿಜಿಯಾದ ನಂತರ ಕನ್ನಡಕ್ಕೆ ಅಪರೂಪವಾಗಿದ್ದರು. ತೆಲುಗಿನ 'ಅತ್ತಾರಿಂಟಿಕೆ ದಾರೇದಿ' ಚಿತ್ರ ಯಶಸ್ವಿಯಾದ ನಂತರ ಅವರಿಗೆ ತೆಲುಗಿನಲ್ಲಿ ಸಾಕಷ್ಟು ಅವಕಾಶಗಳು ದೊರೆಯುತ್ತಿವೆ.

ಈ ಮೊದಲು 'ರೋಸ್' ಎನ್ನುವ ಸಿನಿಮಾ ನಿರ್ದೇಶಿಸಿದ್ದ ಸಹನಾ ಮೂರ್ತಿ 'ಲೀಡರ್' ಮೂಲಕ ದೊಡ್ಡ ಬಜೆಟ್‌ನ ಚಿತ್ರವೊಂದನ್ನು ರೂಪಿಸುತ್ತಿದ್ದಾರೆ. ಈ ಚಿತ್ರಕ್ಕಾಗಿ ಅವರು ಕಲೆಹಾಕಿರುವ ತಾರಾಗಣ ಕುತೂಹಲಕರವಾಗಿದೆ. ದೀಪಿಕಾ ಕಾಮಯ್ಯ ಪತ್ರಕರ್ತೆಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಟ ಶ್ರೀನಗರ ಕಿಟ್ಟಿ ಮತ್ತು ಭಾವನಾ ಬೆಳೆಗೆರೆ ದಂಪತಿಯ ಪುತ್ರಿ ಬೇಬಿ ಪರಿಣಿತ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದಾಳೆ. ವಿಜಯ ರಾಘವೇಂದ್ರ, ಗುರುರಾಜ್, ಲೂಸ್ ಮಾದ ಯೋಗಿ ಹಾಗೂ ಪ್ರಕಾಶ್ ಬೆಳವಾಡಿ ತಾರಾಗಣದಲ್ಲಿರುವ ಪ್ರಮುಖರು. ವೀರಸಮರ್ಥ್ ಸಂಗೀತ ಹಾಗೂ ಗುರುಪ್ರಶಾಂತ್ ರೈ ಛಾಯಾಗ್ರಹಣ ಚಿತ್ರಕ್ಕಿದೆ.



